# ಮತ್ತೊಂದು ಅಧ್ಯಾಯ

ನನ್ನ ಅಕ್ಕನ ಮುಂದೆ ಹೇಳಿಕೊಂಡೆ

ನಾನು ಹದಿಮೂರು ವರ್ಷದವಳಿದ್ದಾಗ
ಪಕ್ಕದ ಮನೆಯ ಓಕೋಟ್
ತನ್ನ ನಾಲಿಗೆಯನ್ನು ನನ್ನ ಬಾಯಲ್ಲಿ ಹಾಕಿ
ಅದನ್ನು 'ಕಿಸ್' ಎಂದು ಕಣ್ಣು ಹೊಡೆದ

ನನ್ನ ಕುಪ್ಪಸದೊಳಗೆ ತನ್ನ ಕೈಗಳನ್ನು ತೂರಿಸಿ
ನನ್ನೆದೆಯನ್ನು ಹಿಟ್ಟಿನಂತೆ ನಾದಲು ಪ್ರಯತ್ನಿಸಿದ

ಮತ್ತೆ ಅವ ಅಷ್ಟಕ್ಕೇ ಸುಮ್ಮನಾಗಲಿಲ್ಲ
ಅದಕ್ಕೆ 'ಲವ್' ಅನ್ನೊ ಸುಂದರ ಹೆಸರು ಕೊಟ್ಟ

ಅಕ್ಕ ಅಚ್ಚರಿಯಿಂದ ಕೇಳಿದಳು
ಇದನ್ನೆಲ್ಲಾ ಈಗ್ಯಾಕೆ ಹೇಳ್ತಿದಿಯಾ
ಹದಿನೇಳು ವರ್ಷಗಳ ನಂತರ?

ನಾನಂದೆ
ಪರಮ ರಹಸ್ಯವನ್ನು ಖಾಲಿ ಮಾಡಿ ಬಿಡುವಷ್ಟು
ದುರ್ಬಲವಾಗಿರಲಿಲ್ಲ ನನ್ನ ಜಠರ
ನನ್ನ ಮನಸ್ಸು ನನಗೆಲ್ಲವ ಮರೆ ಮಾಚಲು ಸಹಾಯ ಮಾಡಿತು

ನನ್ನಕ್ಕ ಮಾರ್ಮಿಕವಾಗಿ ಹೀಗೆ ನುಡಿದಳು
ನಾನು ಹಾಗೆ ಯಾರ್ದು ಹೊಟ್ಟೆಗೆ ಹಾಕ್ಕೊಳ್ಳೊಕೇ ಹೋಗಲ್ಲಮ್ಮ
ಆಗಿಂದಾಗೆ ಕಾರಿಕೊಳ್ಳುತ್ತೇನೆ...

ನನ್ನಷ್ಟಕ್ಕೆ ನಾನು ಅಂದುಕೊಂಡೆ
ಎಂಥಾ ಅದೃಷ್ಟ ಕಣೆ ನಿಂದು!

ಯಾವಾಗ ಅಕ್ಕ, ಪತಿಪರಮೇಶ್ವರನೆಂದು ಕರೆಯುವ ವ್ಯಕ್ತಿ
ನನಗೆ ಮತ್ತೊಂದು ಹೊಸ ಅಧ್ಯಾಯ ಪರಿಚಯಿಸಿದನೋ

ಆವಾಗಿನಿಂದಲೇ
ಅಂದರೆ
1999 ರಿಂದಲೇ
ನನ್ನದೇ ವಾಂತಿ ನನ್ನ ಗಂಟಲಿನಲ್ಲಿ ಉಳಿದುಕೊಂಡು ಬಿಟ್ಟಿದೆ

